

ನೆಹರೂ ಅವರೊಂದಿಗೆ

## ನೆಹರೂಗೆ ಕಮಲ!

ಒಮ್ಮೆ ನೆಹರೂ ಅವರ ಹುಟ್ಟುಹಬ್ಬದಂದು ಗೋಪಾಲಶಾಸ್ತ್ರಿ ಮತ್ತು ಸಾವಿತ್ರಿ ಶಾಸ್ತ್ರೀ ಅವರು ತಮ್ಮ ಮಕ್ಕಳೊಂದಿಗೆ ಕಮಲದ ಹೂ ತೆಗೆದುಕೊಂಡು ನೆಹರೂ ಮನೆಗೆ ಹೋಗಿದ್ದರಂತೆ. ನೆಹರೂ ಪ್ರೀತಿಯಿಂದ ಬರಮಾಡಿಕೊಂಡು, ತಂಗಿ ವಿಜಯಲಕ್ಷ್ಮಿ ಪಂಡಿತ ಅವರಿಗೆ – 'ದೇಖೋ ಕಿತನಾ ಅಚ್ಛಾ ಫೂಲ್ ಹೈ', ನೀರಲ್ಲಿ ಹಾಕಿಡು ಅಂತ ಸಹೋದರಿಗೆ ಕೊಟ್ಟರಂತೆ.

ಆಗಿನ ಜನ ನಾಯಕರುಗಳಿಗೆ ಯಾವ ಸುರಕ್ಷಾ ಸಿಬ್ಬಂದಿಗಳ ಅಗತ್ಯವಿದ್ದಿಲ್ಲ. ಬೇಸಿಗೆಯಲ್ಲಿ ನೆಹರೂ ವರಾಂಡದಲ್ಲೇ ಮಲಗುತ್ತಿದ್ದರು. ಆಗ ಈಗಿನ ಪಾಲಿಕಾ ಬಾಜಾರ್ ಇದ್ದ ಜಾಗೆಯಲ್ಲಿ ಅವರ 'ಭಾರತ ಸೇವಕ ಸಮಾಜ'ದ ಕಚೇರಿಯಿರುತ್ತಿತ್ತು. ಅಲ್ಲಿಗೆ ಕಾಲುನಡಿಗೆಯಲ್ಲಿಯೇ ಬಂದು ಹೋಗುತ್ತಿದ್ದರಂತೆ. ಗುಲ್ಜಾರಿ ಲಾಲ್ ನಂದಾ ಭಾರತ ಸೇವಕ ಸಮಾಜದ ಅಧ್ಯಕ್ಷರಾಗಿದ್ದರು ಆಗ.

೧೯೬೦ರ ಸಮಯದಲ್ಲೇ ಸಾವಿತ್ರಿ ಶಾಸ್ತ್ರಿ ಮತ್ತು ಅವರ ಸ್ನೇಹಿತೆ ಕೇಜರಿವಾಲ್ ಇಬ್ಬರೂ ಕನಾಟ್ ಪ್ಲೇಸಿನ ಮಿಕಾಡೋ ರೆಸ್ಟುರಾಂಟಿನಲ್ಲಿ ಚೈನೀಸ್ ಫ್ರೈಡ್ ರೈಸ್, ಚಿಲ್ಲಿ ಸಾಸ್ ಮಂಚೂರಿ ತಿನ್ನಲು ಹೋಗುತ್ತಿದ್ದರಂತೆ. 'ಅಬ್ಬಾ' ಎಂದುಕೊಂಡೆ. ನಮ್ಮ ಅಮ್ಮಂದಿರು ಮಾಡಿ ಹಳೆಯದಾದ ಹೇರ್ ಸ್ಟೈಲ್, ಅನೇಕ ರೀತಿಯ ಪೋಲಕಾ, ಬ್ಲೌಸು ವಿನ್ಯಾಸಗಳೆಲ್ಲ ನಮಗೀಗ ಫ್ಯಾಶನ್ ಆಗಿವೆ ಅಷ್ಟೆ. ಅಂತೆಯೇ ಚೈನೀಸ್ ಫುಡ್.

ಕಥೆಗಳೇ ತುಂಬಿಕೊಂಡಿವೆ. ಇಂಥದರಲ್ಲಿ ಕನ್ನಡಿಗರ ಕಥೆಯೂ ಇದೆಯಲ್ಲ. ಬಹುತೇಕ ಕನ್ನಡಿಗರು. ಅದರಲ್ಲೂ ದೆಹಲಿ ಕನ್ನಡಿಗರಿಗೂ ಗೊತ್ತಿರದ ಕಥೆಯೊಂದು ಯಮುನೆಯ ಹರಿವಿನಲ್ಲಿ ಅಡಗಿಹೋಗಿದೆಯಲ್ಲ!

ಆ ಕಾಲವೊಂದಿತ್ತು. ಮೋಟರ್ ಗಾಡಿ ಸೌಕರ್ಯವಿಲ್ಲದ ಕಾಲದಲ್ಲಿ ಕಾಶಿಗೆ ಹೋದವರು ಮರಳಿ ಬರುವುದಿಲ್ಲ ಎಂಬ ನಂಬಿಕೆಯ ಕಾಲ. ಅವರ ಶ್ರಾದ್ಧ ಕರ್ಮಗಳನ್ನೆಲ್ಲ ತೀರಿಸಿ ಗಂಗಾ ಸಮಾರಾಧನೆಯನ್ನೂ ಮಾಡಿ ಬೀಳ್ಕೊಡುತ್ತಿದ್ದರಂತೆ. ಹೀಗೆ ಸುಮಾರು 193 ವರ್ಷಗಳ ಹಿಂದೆ ಕಾಶಿಯಾತ್ರೆಗೆಂದು ಹೋಗಿ ಮರಳಿ ಊರಿಗೆ ಹೋಗದೇ ಬಿಹಾರದ ಗಯಾದಲ್ಲಿ ನೆಲೆಸಿಹೋದ ಕುಟುಂಬ ದಿ. ಗೋಪಾಲ ಶಾಸ್ತ್ರಿಗಳ ಪೂರ್ವಜರದ್ದು. ಯಾತ್ರೆಗೆಂದು ಬಂದ ಅವರ ಪೂರ್ವಜರು ಕಾಶಿಯಲ್ಲಿಯೂ ಮತ್ತು ಬಿಹಾರದ ಬೋಧಗಯಾದಲ್ಲಿ ನೆಲೆಸಿಹೋದರು. ಗೋಪಾಲಶಾಸ್ತ್ರಿಯವರ ತಾತ ಸೂರ್ಯನಾರಾಯಣ ದೀಕ್ಷಿತರು ಮೈಸೂರಿನ ಕೃಷ್ಣಾಗಿರಿಯವರು. (ವೇದಾಧ್ಯಯನ, ಪೌರೋಹಿತ್ಯದಿಂದಾಗಿ ದೀಕ್ಷಿತ ಬಿರುದು ಬಂದಿರಬಹುದು. ಕುಟುಂಬದ ಹೆಸರು ಶಾಸ್ತ್ರಿ ಎಂದಿದೆ.)

ಇನ್ನೊಂದು ಕಥನದ ಪ್ರಕಾರ 1825ರಲ್ಲಿ ಅದ್ವೈತ ಮತದ ಅನುಯಾಯಿಗಳಾಗಿದ್ದ ದೀಕ್ಷಿತ ಕುಟುಂಬ ಶಂಕರರ ಅದ್ವೈತ ಪ್ರಚಾರ (ಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಮಠಗಳಲ್ಲಿ ಗಯಾ ಶಾಖೆಯೂ ಒಂದು) ಮತ್ತು ಪೌರೋಹಿತ್ಯಕ್ಕಾಗಿ ಮೈಸೂರಿನಿಂದ ವಲಸೆಹೊರಡುತ್ತದೆ. ಸಂಸ್ಕೃತಿಯ ಉಳಿವು ಮತ್ತು ಪ್ರಚಾರದ ಕಾರ್ಯಕ್ಕಾಗಿ ಅಂದಿನ ಆಸ್ಥಾನದ ರಾಜರುಗಳೇ ಸ್ಥಾನಿಕ ಬ್ರಾಹ್ಮಣ ಕುಟುಂಬಗಳನ್ನು ಉತ್ತರಭಾರತಕ್ಕೆ ಕಳಿಸುತ್ತಿದ್ದರಂತೆ. ಹಾಗೆ ಸೂರ್ಯನಾರಾಯಣ ದೀಕ್ಷಿತರ ಕುಟುಂಬವೂ ಕಾಲುನಡಿಗೆಯಲ್ಲಿ ಹೊರಟಿತು ಎಂಬುದೊಂದು ಕಥೆ. ಕಾಲುದಾರಿಯ ಪ್ರಯಾಣವೇನೂ ಸಾಮಾನ್ಯದ್ದಲ್ಲ. ಕಷ್ಟಕರ ಯಾತ್ರೆ, ಕಾಡು ಮೃಗಗಳ ಭಯ ಒಂದೆಡೆಯಾದರೆ ಕಳ್ಳಕಾಕರು, ದರೋಡೆಕೋರರ ಭಯ ಇನ್ನೊಂದೆಡೆ. ಹೇಗೋ ಜೀವವುಳಿಸಿಕೊಂಡು ದೀಕ್ಷಿತ ಕುಟುಂಬ ಉತ್ತರಭಾರತ ತಲುಪುತ್ತದೆ. ಸೂರ್ಯನಾರಾಯಣರ ಸೋದರನೊಬ್ಬ ಕಾಶಿಯಲ್ಲಿಯೇ ನೆಲೆಸುತ್ತಾರಂತೆ (ಈಗಲೂ ಕಾಶಿಯಲ್ಲಿ ಕುಟುಂಬದವರು ಇದ್ದಾರೆ). ಇವರು ಬಿಹಾರಕ್ಕೆ ಪ್ರಯಾಣಿಸಿ ಗಯಾದಲ್ಲಿ ನೆಲೆಯೂರುತ್ತಾರೆ. (ಪ್ರಸ್ತುತ ಗಯಾದಲ್ಲಿ ಗೋಪಾಲ ಶಾಸ್ತ್ರಿಗಳ ಚಿಕ್ಕ ತಮ್ಮ ದತ್ತಾತ್ರೇಯ ಶಾಸ್ತ್ರಿಗಳಿದ್ದಾರೆ.)

ಸೂರ್ಯನಾರಾಯಣ ದೀಕ್ಷಿತರ ಮಗ ಸತ್ಯನಾರಾಯಣ ದೀಕ್ಷಿತ. ಸತ್ಯನಾರಾಯಣನ ಪತ್ನಿಯೂ ಮೈಸೂರಿನ ಕೃಷ್ಣಾಗಿರಿಯವರು. ಆಕೆಯ ತಂದೆ ಗಂಜಾಮ್ ಗುಂಡಪ್ಪನವರು ನವರತ್ನದ ವ್ಯಾಪಾರಿಗಳು. ಮುತ್ತು, ರತ್ನ, ವೈಢೂರ್ಯಗಳನ್ನು ಅರಮನೆಗೆ ಸಪ್ಲೈ ಮಾಡುತ್ತಿದ್ದರಂತೆ ಹಾಗೂ ಮೈಸೂರು ಮಹಾರಾಜರ ಆಪ್ತ ಸ್ನೇಹಿತರಾಗಿದ್ದರಂತೆ. ಅವರ ಮಗನೇ ನಮ್ಮ ದೆಹಲಿ ಕನ್ನಡಿಗ ದಿ.ಗೋಪಾಲ ಶಾಸ್ತ್ರಿ. ಮನೆಯ ಕಟ್ಟಾ ಸಂಪ್ರದಾಯದ ಬದುಕು ಅವರಿಗೆ ಹಿಡಿಸಲಿಲ್ಲ. ಅದು ಸ್ವಾತಂತ್ರ್ಯ ಸಂಗ್ರಾಮದ ಗಾಳಿಯ ಕಾಲ. ಡಾ. ರಾಜೇಂದ್ರ ಪ್ರಸಾದ್ ಹಾಗೂ ಜಯಪ್ರಕಾಶ್ ನಾರಾಯಣರಂಥ ಜನನಾಯಕರ ಒಡನಾಟ ಅವರಿಗೆ ಲಭಿಸುತ್ತದೆ. ಮನೆಯವರ ವಿರೋಧದ ನಡುವೆಯೂ ಗೋಪಾಲ ಶಾಸ್ತ್ರಿ ಚಳವಳಿಯಲ್ಲಿ ಧುಮುಕುತ್ತಾರೆ. 1942ರಲ್ಲಿ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದ್ದ ಅವರು, ಬಿಹಾರದ ಹಜಾರಿಬಾಗ್ ಜೈಲು ಸೇರಿದ್ದರು.

ಆಗಿನ ಯುವಕರು 'ಬ್ರಿಟಿಷರ ಕಾಲದಲ್ಲಿ ಮದುವೆ ಆಗುವುದು ಬೇಡ,